ಶಹಾಪುರ ಪಟ್ಟಣದಲ್ಲಿ ಐ.ಯು.ಡಿ.ಪಿ. ಯೋಜನೆಯ ಬಗ್ಗೆ.

೧೧೪೯. ಶ್ರೀ ಶಿವಶಂಕರಪ್ಪ ಗೌಡ (ಶಹಾಪುರ).— ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ನಗರಾಭಿವೃದ್ಧಿ ಹಾಗೂ ಆಹಾರ ನಾಗರೀಕ ಪೂರೈಕೆ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಶಹಾಪುರ ಪಟ್ಟಣವನ್ನು ಐ.ಯು.ಡಿ.ಪಿ. ಯೋಜನೆಗೆ ಸೇರಿಸಿಕೊಂಡಿರುವುದು ನಿಜವೇ;

೨) ಹಾಗಿದ್ದಲ್ಲಿ ಯಾವಾಗ ಈ ಯೋಜನೆ ಮಂಜೂರಾಯಿತು;

೩) ವಿವಿಧ ಸ್ಕೀಮುಗಳಲ್ಲಿ ಎಷ್ಟು ಹಣ ಮಂಜೂರಾಯಿತು ಮತ್ತು ಖರ್ಚಾಯಿತು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ನಗರಾಭಿವೃದ್ಧಿ ಹಾಗೂ ಆಹಾರ ಮಂತ್ರಿಗಳು.).—

೧) ಹೌದು.

೨) ೧೯೮೨-೮೩ನೇ ಸಾಲಿನಲ್ಲಿ.

೩) ಮಂಜೂರಾಗಿರುವುದು ೮೫.೩೬ ಲಕ್ಷರೂ.ಗಳು೫೩,೨೨ಲಕ್ಷ ರೂ.ಗಳು. ಖರ್ಚಾಗಿರುವುದು

ಅಧ್ಯಕ್ಷರು — ಶಿವಶಂಕರಪ್ಪ ಗೌಡ ಅವರ ಪರವಾಗಿ ಎಂ. ವೀರಯ್ಯ ಸ್ವಾಮಿಯವರು ಉಪ ಪ್ರಶ್ನೆ ಕೇಳುತ್ತಾರೆ. ವೀರಯ್ಯ ಸ್ವಾಮಿಯವರೇ, ನೀವು ಹೀಗೆ ಜನರಲ್ಲಾಗಿ ಪತ್ರ ತಂದರೆ ನಾನು ಅವಕಾಶ ಕೊಡುವುದಿಲ್ಲ. ಇಂತಹ ತಾರೀಖಿನ ಇಂತಹ ಪ್ರಶ್ನೆಗೆ ಎಂದು ಸ್ಪೆಸಿಫಿಕ್ಕಾಗಿ ಪತ್ರ ತರಬೇಕು. ಇದೇ ಕೊನೆ ಎಂದು ಹೇಳಿ ತಮಗೆ ಅವಕಾಶ ಕೊಡುತ್ತಿದ್ದೇನೆ.

ಶ್ರೀ ಎಂ. ವೀರಯ್ಯ ಸ್ವಾಮಿ.— ಅಧ್ಯಕ್ಷರೇ ವಿವಿಧ ಸ್ಕೀಮ್‌ಗಳು ಎಂದರೆ ಯಾವ ಯಾವ ಸ್ಕೀಮ್‌ಗಳಿಗೆ ಎಷ್ಟೆಷ್ಟು ಖರ್ಚು ಆಗಿದೆ ಎಂಬ ಬಗ್ಗೆ ಪ್ರಶ್ನೆ ಕೇಳಿದ್ದೇವೆ. ಅದಕ್ಕೆ ಉತ್ತರವನ್ನು ಕೊಟ್ಟೇ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.— ವಿವರ ಕೊಡುತ್ತೇನೆ. ಭೂಸ್ವಾಧೀನಕ್ಕೆ ೧೫.೫೦ ಲಕ್ಷ ರೂಪಾಯಿಗಳು. ಭೂ ಅಭಿವೃದ್ಧಿಗೆ ೧೯.೧೬ ಲಕ್ಷ ರೂಪಾಯಿಗಳು. ರಸ್ತೆ ಅಭಿವೃದ್ಧಿ ಮತ್ತು ನಿರ್ಮಾಣಕ್ಕೆ ೧.೯೧ ಲಕ್ಷ ರೂಪಾಯಿಗಳು. ಮಂಡಿ ಪಂತ್ತು ಮಾರ್ಕೆಟ್‌ಗೋಸ್ಕರ ೧ ಲಕ್ಷ ರೂಪಾಯಿಗಳು. ಕಡಿಮೆ ವೆಚ್ಚದ ಶೌಚಾಲಯ ನಿರ್ಮಾಣಕ್ಕೆ ೧೫.೫೮ ಲಕ್ಷ ರೂಪಾಯಿಗಳು ಹೀಗೆ ಒಟ್ಟು ೫೩.೨೪ ಲಕ್ಷ ರೂಪಾಯಿಗಳು.

ಶ್ರೀ ಎಂ. ವೀರಯ್ಯ ಸ್ವಾಮಿ.— ಐ.ಆರ್.ಡಿ.ಪಿ.ಸ್ಕೀಮ್‌ನಲ್ಲಿ ಕೇಂದ್ರ ಸರ್ಕಾರ ಕೊಟ್ಟಷ್ಟೇ ಹಣವನ್ನು ರಾಜ್ಯ ಸರ್ಕಾರ ಕೂಡಾ ಕೊಡಬೇಕು. ಇದರಲ್ಲಿ ರಾಜ್ಯ ಸರ್ಕಾರ ಹಣ ಖರ್ಚು ಮಾಡುತ್ತಿದೆಯೇ? ಹಾಗೂ ಇನ್ನುಳಿದ ಹಣವನ್ನು ಖರ್ಚುಮಾಡದೇ ಇರುವುದಕ್ಕೆ ಕಾರಣವೇನು?

ಶ್ರೀ ಎ. ಲಕ್ಷ್ಮೀಸಾಗರ್.— ಇದಕ್ಕೆ ಕೇಂದ್ರದಿಂದ ಹಣ ಬರುವುದರ ಬಗ್ಗೆ ಸಂಶಯ ಇಲ್ಲ. ಮುಖ್ಯವಾಗಿ ಬಂದಿರುವ ತೊಡಕು ಏನೆಂದರೆ ಹಿಂದಿನ ವರ್ಷ ಮುನಿಸಿಪಾಲಿಟಿಯವರು ಈ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದಿತ್ತು. ನಾನಾ ಕಾರಣಗಳಿಂದ ಮುನಿಸಿಪಾಲಿಟಿಯವರ ಕೈಯಲ್ಲಿ ಮಾಡುವುದಕ್ಕೆ ಆಗಿಲ್ಲ. ಆದುದರಿಂದ ಆ ನಿರ್ಣಯವನ್ನು ಬದಲಾಪಣೆ ಮಾಡಿ ಈ ಕೆಲಸವನ್ನು ಮುನಿಸಿಪಾಲಿಟಿ ಡೈರೆಕ್ಟರೇಟ್‌ಗೆ ಕೊಡಬೇಕೆಂದು ತೀರ್ಮಾನ ಮಾಡಿ ಅವರಿಗೆ ಆ ಕೆಲಸವನ್ನು ಒಪ್ಪಿಸಿದ್ದೇವೆ. ಬಾಕಿ ಕಾರ್ಯಕ್ರಮಗಳನ್ನು ಜಾರಿ ಮಾಡುವುದಕ್ಕೋಸ್ಕರ ಲ್ಯಾಂಡ್ ಆರ್ಮಿಗೆ ಈ ಕೆಲಸ ಮಾಡುವುದಕ್ಕೆ ಕೊಡಬೇಕೆಂದು ನಿರ್ಧಾರ ಮಾಡಿದ್ದೇವೆ. ಇದನ್ನು ಬೇಗನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.